ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸ್ಪೆಷಲ್ ಕೇಸ್ ನಂಬರ್ : 490/2018**

**ಫ್ರಾಸಾ- 1 ಚಾಸಾ- 1**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ನೀತಾ |
| ಗಂಡನ ಹೆಸರುಃ | : | ಮಯೂರ ಕೆ ಸಿ |
| ವಯಸ್ಸುಃ | : | 40 ವರ್ಷ |
| ಉದ್ಯೋಗಃ | : | ಬ್ಯೂಟಿಷಿಯನ್ |
| ವಾಸ | : | ಸುಂಡುವಳ್ಳಿ, ಯಸಳೂರು ಹೋಬಳಿ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 20-03-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ಆರೋಪಿತರ ಪರಿಚಯ ಇದೆ. ಅವರನ್ನು ಹೊಸೂರು ಪಂಚಾಯ್ತಿಯಲ್ಲಿ ನೋಡಿರುತ್ತೇನೆ. ಹೊಸೂರು ಪಂಚಾಯ್ತಿಗೆ ನಾನು ಇ ಸ್ವತ್ತು ಮಾಡಿಕೊಳ್ಳಲು ಹೋಗಿದ್ದೆನು. ಅಲ್ಲಿ 3-4 ಸಲ ಹೋಗಿದ್ದರೂ ಕೆಲಸ ಆಗಲಿಲ್ಲ. ಹೊಸೂರು ಪಂಚಾಯ್ತಿಗೆ ಹೋದಾಗ ನಾನುಅಲ್ಲಿಯ ಪಿಡಿಒ ರವರನ್ನು ಭೇಟಿಯಾಗಿದ್ದೆನು. ಅವರು ಇಂದು ನ್ಯಾಯಾಲಯದ ಮುಂದಿರುವ 1ನೇ ಆರೋಪಿತರು. ನಾನು ಸದರಿಯವರ ಬಳಿ ನನ್ನ ಕೆಲಸ ಏಕೆ ಆಗಲಿಲ್ಲ ಎಂದು ವಿಚಾರಿಸಲಿಲ್ಲ. ಆಗ ಯಾರೋ ಒಬ್ಬರು ನನಗೆ ಲೋಕಾಯುಕ್ತಕ್ಕೆ ತಿಳಿಸುವಂತೆ ಹೇಳಿದ್ದರು.

2.ದಿಃ13-3-2017ರಂದು ಲೋಕಾಯುಕ್ತ ಆಫೀಸಿಗೆ ಹೋಗಿದ್ದೆನು. ಅಲ್ಲಿ ಪೊಲೀಸರ ಬಳಿ ಇಖಾತಾಗೆ ಸಂಬಂಧಿಸಿದಂತೆ ಹೊಸೂರು ಪಂಚಾಯ್ತಿಯಲ್ಲಿ ನನ್ನ ಕೆಲಸ ಆಗುತ್ತಿಲ್ಲ ಎಂದು

ಹೇಳಿದೆನು. ಆಗ ಅವರು ದೂರುಕೊಡಿ ಎಂದು ಹೇಳಿದರು. ಆ ದೂರನ್ನು ನಾನು ಬರೆದಿಲ್ಲ. ಅಲ್ಲಿಯ ಪೊಲೀಸರೇ ಬರೆದುಕೊಂಡರು. ನಾನು ಎಸ್.ಎಸ್ಎಲ್.ಸಿ ಓದಿದ್ದೇನೆ, ಓದಲು ಬರೆಯಲು ಬರುತ್ತದೆ, ಬ್ಯೂಟಿಷಿಯನ್ ಕೆಲಸ ಮಾಡುತ್ತಿದ್ದೇನೆ. ಅದನ್ನು ಸ್ವಂತವಾಗಿ ನಡೆಸುತ್ತಿದ್ದೇನೆ. ಈಗ ತೋರಿಸಿದ ದಾಖಲೆಯಲ್ಲಿರುವ ರುಜು ನನ್ನದೆ. ಈ ದಾಖಲೆಯನ್ನು ನಿಪಿ-1 ಎಂದು ಸಾಕ್ಷಿಯ ರುಜುವನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದೂರು ಕೊಟ್ಟ ನಂತರ ನನ್ನ ಸಮಕ್ಷಮ ಏನೂ ಮಾಡಿಲ್ಲ. ಸಹಿ ಮಾಡಿ ನಾನು ಬಂದೆನು. ಈಗ ತೋರಿಸಿದ ಎರಡೂ ದಾಖಲೆಗಳಲ್ಲಿ ನನ್ನ ರುಜು ಇರುತ್ತದೆ. ಈ ದಾಖಲೆಗಳನ್ನು ಕ್ರಮವಾಗಿ ನಿಪಿ-2 ಮತ್ತು 3 ಎಂದು ಸಾಕ್ಷಿಯ ರುಜುಗಳನ್ನು ಕ್ರಮವಾಗಿ ನಿಪಿ-2(ಎ) ಮತ್ತು 3(ಎ) ಎಂದು ಗುರುತಿಸಲಾಯಿತು. ಠಾಣೆಯಿಂದ ಮತ್ತೆಲ್ಲೂ ಹೋಗಲಿಲ್ಲ.

3.ನಳಂದ ನನ್ನ ತಮ್ಮ. ಅವರು ಆರ್ಮಿಯಲ್ಲಿ ಇದ್ದಾರೆ. ನಾನು ಲೋಕಾಯುಕ್ತ ಪೊಲೀಸರ ಜೊತೆ ಹೊಸೂರು ಗ್ರಾಮ ಪಂಚಾಯ್ತಿಗೆ ಹೋಗಿಲ್ಲ. ಅಲ್ಲಿ ಯಾವುದೇ ಮಹಜರು ನಡೆಸಿಲ್ಲ.

(ಈ ಹಂತದಲ್ಲಿ ಮಾನ್ಯ ವಿಶೇಷ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ವಿಶೇಷ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಹೊಸೂರು ಗ್ರಾಮ ಪಂಚಾಯ್ತಿಗೆ ನನ್ನ ತಮ್ಮ ನಳಂದರವರ ಹೆಸರಿಗೆ ಖಾತಾ ಬದಲಾವಣೆ ಮಾಡಲು ಹೋಗಿದ್ದೆ ಎಂದರೆ ಸರಿ. ನಾನು ಅದಕ್ಕೆ ಸಂಬಂಧಿಸಿದಂತೆ ಸದರಿ ಗ್ರಾಮ ಪಂಚಾಯ್ತಿಗೆ ಹೋದಾಗನ್ಯಾಯಾಲಯದ ಮುಂದಿರುವ 1ನೇ ಆರೋಪಿ ಪಿಡಿಒ ರವರ ಸತಾಯಿಸುತ್ತಿದ್ದರು, ಆಗ ಬನ್ನಿ ಈಗ ಬನ್ನಿ ಎಂದು ಹೇಳುತ್ತಿದ್ದರು ಮತ್ತು ಕರೆ ಮಾಡಿದಾಗ

ಕರೆಯನ್ನು ಸ್ವೀಕರಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. 2ನೇ ಆರೋಪಿ ಸದರಿ ಗ್ರಾ.ಪಂ.ಯಲ್ಲಿ ಕಂಪ್ಯೂಟರ್ ಆಪರೇಟರ್ ಆಗಿದ್ದರು ಎಂದರೆ ಸರಿ. 9-3-2017ರಂದು ನಾನು ಪಿಡಿಒ ರವರಿಗೆ ಕರೆ ಮಾಡಿದಾಗ ಅವರು ಕರೆಯನ್ನು ಕಟ್ ಮಾಡಿದರು, ಸ್ವಲ್ಪ ಸಮಯದ ನಂತರ 2ನೇ ಆರೋಪಿತರು ಕಛೇರಿಯ ಸ್ಥಿರದೂರವಾಣಿ ಮೂಲಕ ನನಗೆ ಕರೆ ಮಾಡಿ ಖಾತೆ ಬದಲಾವಣೆ ಮಾಡಲು 3000ರೂ ಕೊಡಬೇಕು, ಚೆಕ್ಕುಬಂದಿ ಮಾಡಿಕೊಡಲು 2000ರೂ ಕೊಡಬೇಕು ಎಂದು ಹೇಳಿದರು ಎಂದರೆ ಸರಿಯಲ್ಲ. ನಂತರ ಪುನಃ ನಾನು 1ನೇ ಆರೋಪಿತರ ನಂಬರಿಗೆ ಕರೆ ಮಾಡಿದಾಗ ಸೌಮ್ಯಾರವರು ಸ್ವೀಕರಿಸಿ 1ನೇ ಆರೋಪಿತರು ಆ ಕೆಲಸ ಮಾಡಿಕೊಡಲು 5000ರೂ ಕೊಡಬೇಕೆಂದು ಕೇಳಿರುತ್ತಾರೆಂದು ತಿಳಿಸಿರುತ್ತಾರೆಂದರೆ ಸರಿಯಲ್ಲ. 1ನೇ ಆರೋಪಿ ತಾನು ಎಲ್ಲಾ ವಿಚಾರವನ್ನು 2ನೇ ಆರೋಪಿತರ ಬಳಿ ಹೇಳಿರುತ್ತೇನೆ, ಅವರು ಹೇಳಿದಂತೆ ಮಾಡಿ ಎಂದು ತಿಳಿಸಿದರು ಎಂದರೆ ಸರಿಯಲ್ಲ. ಆಗ ನಾನು 13-3-2017ರಂದು ಹಣ ತಲುಪಿಸುವುದಾಗಿ ಹೇಳಿದೆನು ಎಂದರೆ ಸರಿಯಲ್ಲ. ಆ ವಿಚಾರವನ್ನು ನಾನು ನನ್ನ ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದೆನು ಎಂದರೆ ಸರಿಯಲ್ಲ. ನನಗೆ ಆ ಲಂಚದ ಹಣ ಕೊಡಲು ಇಷ್ಟವಿಲ್ಲದ ಕಾರಣ ನಾನು ಎಸಿಬಿ ಕಛೇರಿಗೆ ಬಂದು ನಿಪಿ-1ರಂತೆ ನನ್ನ ಹಸ್ತಾಕ್ಷರದಲ್ಲಿ ದೂರು ಬರೆದುಕೊಟ್ಟಿರುತ್ತೇನೆ ಹಾಗೂ ಮೊಬೈಲ್ ರೆಕಾರ್ಡ್ ಹಾಜರುಪಡಿಸಿದೆನು ಎಂದರೆ ಸರಿಯಲ್ಲ.

2.ತದನಂತರ ಪೊಲೀಸರು ಇಬ್ಬರು ಪಂಚರನ್ನು ಠಾಣೆಗೆ ಕರೆಸಿಕೊಂಡರು, ಅವರಿಗೆ ದೂರಿನ ವಿಚಾರವನ್ನು ತಿಳಿಸಿ, ಅವರ ಸಮಕ್ಷಮದಲ್ಲಿ ನಾನು ಆರೋಪಿತರಿಗೆ ಲಂಚ ನೀಡಲು ತಂದಿದ್ದ 5000ರೂಪಾಯಿ ಹಣವನ್ನು ಹಾಜರುಪಡಿಸಿದೆನು, ಅವುಗಳು 500ರ ಹತ್ತು ನೋಟುಗಳಾಗಿದ್ದವು, ಅದಕ್ಕೆ ಪೊಲೀಸರು ಫಿನಾಫ್ತಲಿನ್ ಪುಡಿ ಹಚ್ಚಿದರು, ನಂತರ ಪಂಚ-1 ಶ್ರೀಧರ್ ರವರ ಕೈಗೆ ಕೊಟ್ಟು, ಅದನ್ನು ಅವರು ಎಣಿಸಿ ನೋಡಿ ನಂತರ ನನ್ನ ಪರ್ಸ್ ಒಳಗೆ

ಇಟ್ಟರು ಮತ್ತು ಅದನ್ನು ಆರೋಪಿತರ ಕಛೇರಿಗೆ ಹೋದಾಗ ಅವರು ನನ್ನ ಕೆಲಸಕ್ಕೆ ಸಂಬಂಧಿಸಿದಂತೆ ಲಂಚಕ್ಕೆ ಬೇಡಿಕೆ ಇಟ್ಟರೆ ಕೊಡಬೇಕೆಂದು ತಿಳಿಸಿದರು ಎಂದರೆ ಸರಿಯಲ್ಲ. ಈ ವಿಚಾರವಾಗಿ ಪೊಲೀಸರು ನಿಪಿ-2ರಂತೆ ಮಹಜರು ಮಾಡಿ ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ. ಹಾಗೆಯೇ ತನಿಖಾಧಿಕಾರಿ ಆರೋಪಿತರ ಬಳಿ ಹೋದಾಗ ನಡೆಯುವ ಸಂಭಾಷಣೆಯನ್ನು ದಾಖಲಿಸಿಕೊಳ್ಳುವಂತೆ ವಾಯ್ಸ್ ರೆಕಾರ್ಡರ್ ನ್ನು ನನಗೆ ನೀಡಿದರು, ನಂತರ ನಮ್ಮೆಲ್ಲರನ್ನು ಕರೆದುಕೊಂಡು ಹೊಸೂರು ಗ್ರಾ.ಪಂ. ಕಛೇರಿ ಬಳಿ ಹೋದರು ಎಂದರೆ ಸರಿಯಲ್ಲ. ಅಲ್ಲಿ ನಾನು ಮತ್ತು ಪಂಚರಾದ ಶ್ರೀಮತಿ ಶೋಭಾರವರು ಸದರಿ ಕಛೇರಿಯ ಒಳಗಡೆ ಹೋದೆವು, 1ನೇ ಆರೋಪಿತರಲ್ಲಿ ತನ್ನ ಇಸ್ವತ್ತು ಖಾತೆಗೆ ಸಂಬಂಧಿಸಿದ ಕೆಲಸ ಎಲ್ಲಿಯವರೆಗೆ ಬಂತು ಎಂದು ಕೇಳಿದೆನು, ಅದಕ್ಕೆ 1ನೇ ಆರೋಪಿತರು ಕೆಲಸ ಮಾಡಿಕೊಡುವುದಾಗಿ ಹೇಳಿದರು ಎಂದರೆ ಸರಿಯಲ್ಲ. ಆಗ ನಾನು ನನ್ನ ಪರ್ಸಿನಲ್ಲಿಟ್ಟಿದ್ದ ಫಿನಾಫ್ತಲೀನ್ ಪುಡಿಲೇಪಿತ ಹಣವನ್ನು ಕೊಡಲು ಹೋದಾಗ 1ನೇಆರೋಪಿತರು ಅದನ್ನು 2ನೇ ಆರೋಪಿತರಿಗೆ ನೀಡಲು ತಿಳಿಸಿದರು, ಅದರಂತೆ ನಾನು 2ನೇ ಆರೋಪಿತರಿಗೆ ಹಣವನ್ನು ನೀಡಿದೆನು ಎಂದರೆ ಸರಿಯಲ್ಲ. ನಂತರ ನಾನು ಸದರಿ ಕಛೇರಿಯಿಂದ ಹೊರಕ್ಕೆ ಬಂದು ಬಲಗೈನಿಂದ ನನ್ನ ತಲೆಯನ್ನು ಸವರಿಕೊಂಡು ಸಂಜ್ಞೆ ಮಾಡಿದೆನು, ಆಗ ಪೊಲೀಸರು ಮತ್ತು ಇನ್ಸ್ಪೆಕ್ಟರ್ ಪಂಚ ಅಲ್ಲಿಗೆ ಬಂದರು, ಅವರಿಗೆ ನಾನು ಎಲ್ಲಾ ವಿಚಾರವನ್ನು ತಿಳಿಸಿದೆನು ಎಂದರೆ ಸರಿಯಲ್ಲ. ಪೊಲೀಸರು ಆ ಲಂಚದ ಹಣವನ್ನು ವಶಪಡಿಸಿಕೊಂಡು ನಿಪಿ-3ರಂತೆ ಮಹಜರು ಮಾಡಿದರು ಎಂದರೆ ಸರಿಯಲ್ಲ.

3.ಆರೋಾಪಿತರು ನನ್ನ ತಮ್ಮನ ಇಸ್ವತ್ತು ಖಾತೆಗೆ ಸಂಬಂಧಿಸಿದಂತೆ ಲಂಚಕ್ಕೆ ಬೇಡಿಕೆ ಇಟ್ಟು ಕೆಲಸ ಮಾಡಿಕೊಡದೇ ಇದ್ದ ಕಾರಣ ನಾನು ಎಸಿಬಿ ಕಛೇರಿಗೆ ದೂರುಕೊಟ್ಟಿರುವುದು ಎಂದರೆ ಸರಿಯಲ್ಲ. ನಂತರದಲ್ಲಿ ಪೊಲೀಸರು ಅದಕ್ಕೆ ಬೇಕಾದ ಕ್ರಮವನ್ನು ಅನುಸರಿಸಿದರು

ಮತ್ತು ಲಂಚದ ಹಣವನ್ನು ಪಡೆದುಕೊಂಡ ಆರೋಪಿತರ ವಿರುದ್ಧ ಕ್ರಮ ಜರುಗಿಸಿದರು ಎಂದರೆ ಸರಿಯಲ್ಲ. ಆರೋಪಿತರು ನನ್ನಿಂದ ಲಂಚಕ್ಕೆ ಬೇಡಿಕೆ ಇಟ್ಟ ಕಾರಣ ನಾನು ಎಸಿಬಿ ಕಛೇರಿಗೆ ಹೋಗಿ ದೂರು ಕೊಟ್ಟಿದ್ದರೂ ಕೂಡ ಆರೋಪಿತರೊಂದಿಗೆ ಶರೀಕಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ** ಶ್ರೀ ಡಿ ಹೆಚ್ ಎಲ್ **ವಕೀಲರಿಂದಃ**

ಇರುವುದಿಲ್ಲ ಎಂದು ಹೇಳುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**